**MESCOM-GMAH0ADM/670/2021-GM ADM HR**

I/26596/2022 / ದಿನಾಂಕ: 27/10/2022

# ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ

ಮೆಸ್ಕಾಂ
MESCOM

(ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಟ್ಟಿದೆ)

ಕಂಪನಿ ಗುರುತಿನ ಸಂಖ್ಯೆ: ಯು40109ಕೆಎ2002ಎಸ್‌ಜಿಸಿ030425

ಕಂಪನಿಯ ಅಧಿಕೃತ ಕಛೇರಿ: ಆಡಳಿತ ಕಛೇರಿ, 'ಮೆಸ್ಕಾಂ., ಭವನ' ಕಾವೂರು ಅಡ್ಡ ರಸ್ತೆ, ಬಿಜೈ

ಅಂಚೆ ಪೆಟ್ಟಿಗೆ ಸಂಖ್ಯೆ: 1130, ಮಂಗಳೂರು-575004

ಇ-ಮೇಲ್: gm_mescom@rediffmail.com

ಅಂತರ್ಜಾಲ: www.mescom.karnataka.gov.in

ದೂರವಾಣಿ ಸಂಖ್ಯೆ: 0824-2885761

## ಸುತ್ತೋಲೆ

ವಿಷಯ: 2022 ನೇ ಸಾಲಿನ 67 ನೇ ಕನ್ನಡ ರಾಜ್ಯೋತ್ಸವವನ್ನು ಕಂಪೆನಿಯ ಕಛೇರಿಗಳಲ್ಲಿ ವಿಶೇಷ ರೀತಿಯಲ್ಲಿ ಆಚರಿಸುವ ಬಗ್ಗೆ.

********

ಕರ್ನಾಟಕ ಘನ ಸರ್ಕಾರದ ನಿರ್ದೇಶನಗಳ ಅನ್ವಯ, 2022 ನೇ ಸಾಲಿನಲ್ಲಿ 67 ನೇ ಕನ್ನಡ ರಾಜ್ಯೋತ್ಸವವನ್ನು ನಾಡಿನಾದ್ಯಂತ ಅತ್ಯಂತ ವಿಶಿಷ್ಟವಾಗಿ ಆಚರಿಸಲು ಉದ್ದೇಶಿಸಲಾಗಿದೆ. ಈ ಸಂಬಂಧ ಕನ್ನಡ ನಾಡು, ನುಡಿ, ಸಂಸ್ಕೃತಿ ಮತ್ತು ಪರಂಪರೆಯನ್ನು ಉಳಿಸುವ ಬಗ್ಗೆ ಸಂಕಲ್ಪ ಮಾಡಿ ಹೆಚ್ಚಿನ ಸಂಭ್ರಮ ಉತ್ಸಾಹಗಳಿಂದ ರಾಜ್ಯಾದ್ಯಂತ ದಿನಾಂಕ 28.10.2022 ರಂದು ಬೆಳಿಗ್ಗೆ 11.00 ಗಂಟೆಗೆ ಏಕಕಾಲದಲ್ಲಿ 'ಕೋಟಿ ಕಂಠ ಗಾಯನ' ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದು, ಮೆಸ್ಕಾಂ.,ನ ಎಲ್ಲಾ ಕಛೇರಿಗಳಲ್ಲಿಯೂ ಸಹ ಈ ಕೆಳಗೆ ತಿಳಿಸಿರುವಂತೆ 6 ಗೀತೆಗಳನ್ನು ಎಲ್ಲರೂ ಒಟ್ಟಾಗಿ ಹಾಡಲು ಕ್ರಮವಹಿಸುವಂತೆ ಸೂಚಿಸಲಾಗಿದೆ.

1. ನಾಡ ಗೀತೆಯಾದ 'ಜಯ ಭಾರತ ಜನನಿಯ ತನುಜಾತೆ' - ರಚನೆ : ಶ್ರೀ ಕುವೆಂಪು
2. 'ಉದಯವಾಗಲಿ ನಮ್ಮ ಚೆಲುವ ಕನ್ನಡ ನಾಡು' - ರಚನೆ : ಶ್ರೀ ಹುಯಿಲಗೋಳ ನಾರಾಯಣರಾಯರು
3. 'ಬಾರಿಸು ಕನ್ನಡ ಡಿಂಡಿಮವ...' - ರಚನೆ : ಶ್ರೀ ಕುವೆಂಪು
4. 'ಹಚ್ಚೇವು ಕನ್ನಡದ ದೀಪ .. ' - ರಚನೆ : ಶ್ರೀ ಡಾ.ಡಿ.ಎಸ್. ಕರ್ಕಿ
5. 'ವಿಶ್ವವಿನೂತನ ವಿದ್ಯಾ ಚೇತನ...' - ರಚನೆ : ಶ್ರೀ ಚನ್ನವೀರ ಕಣವಿ
6. 'ಹುಟ್ಟಿದರೆ ಕನ್ನಡ ನಾಡಲ್ಲಿ ಹುಟ್ಟಬೇಕು...' - ರಚನೆ : ಶ್ರೀ ಹಂಸಲೇಖ

ಕಂಪೆನಿಯ ಕಾರ್ಪೋರೇಟ್ ಕಛೇರಿ, ವಲಯ ಕಛೇರಿಗಳು, ವೃತ್ತ ಕಛೇರಿಗಳು, ವಿಭಾಗೀಯ ಕಛೇರಿಗಳು ಹಾಗೂ ಉಪವಿಭಾಗೀಯ ಕಛೇರಿಗಳ ವ್ಯಾಪ್ತಿಯಲ್ಲಿರುವ ಎಲ್ಲಾ ಅಧಿಕಾರಿ/ನೌಕರರನ್ನು ಒಳಗೊಂಡು ಕಡ್ಡಾಯವಾಗಿ ಈ ಕಾರ್ಯಕ್ರಮವನ್ನು ತಮ್ಮ ಹಂತದಲ್ಲಿ ಅಗತ್ಯ ಸಿದ್ಧತೆಗಳೊಂದಿಗೆ ಆಯೋಜಿಸಲು ತಿಳಿಸಲಾಗಿದೆ.

ಕೋಟಿಕಂಠ ಗಾಯನದ ಬಗ್ಗೆ ವಿವರಗಳನ್ನು ಪೂರ್ವಭಾವಿಯಾಗಿ ಇ-ಮೇಲ್ ವಿಳಾಸ https://kannadasiri.karnataka.gov.in/kkg/public ನಲ್ಲಿ ಸಂಬಂಧಿತ ಕಛೇರಿ ಮುಖ್ಯಸ್ಥರುಗಳು ಕಡ್ಡಾಯವಾಗಿ ಅಗತ್ಯ ಮಾಹಿತಿಗಳನ್ನು ದಾಖಲಿಸಿ ನೊಂದಾಯಿಸಿ ಕೊಳ್ಳಲು ಹಾಗೂ ಸದರಿ ಗಾಯನದ ಫೋಟೋ/ವಿಡಿಯೋ, ಸಂಖ್ಯೆ ಇತ್ಯಾದಿ ಉಪಯುಕ್ತ ಮಾಹಿತಿಗಳನ್ನು ಕಾರ್ಯಕ್ರಮ ಮುಗಿದ ತಕ್ಷಣವೇ ಆಯಾ ಜಿಲ್ಲಾ ಸಹಾಯಕ ನಿರ್ದೇಶಕರು, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ರವರಿಗೆ ಸಲ್ಲಿಸಿ ಸದರಿ ಜಾಲತಾಣದಲ್ಲಿ ಅಪ್‌ಲೋಡ್ ಮಾಡಲು ತಿಳಿಸಲಾಗಿದೆ. ಈ ನಿಟ್ಟಿನಲ್ಲಿ ಕೈಗೊಂಡ ಕ್ರಮಗಳ ಬಗ್ಗೆ ಈ ಕಛೇರಿಗೆ ಮಾಹಿತಿ ನೀಡುವಂತೆ ತಿಳಿಸಲಾಗಿದೆ.

ಮುಂದುವರೆದು, ದಿನಾಂಕ 01.11.2022 ರಂದು 'ಕನ್ನಡ ರಾಜ್ಯೋತ್ಸವ'ವನ್ನು ಮೆಸ್ಕಾಂ., ವ್ಯಾಪ್ತಿಯ ಎಲ್ಲಾ ಕಛೇರಿಗಳಲ್ಲಿ ಆಯೋಜಿಸಲು ಸೂಚಿಸಲಾಗಿದೆ.

ಮಾನ್ಯ ವ್ಯವಸ್ಥಾಪಕ ನಿರ್ದೇಶಕರವರಿಂದ
ಅನುಮೋದಿಸಲ್ಪಟ್ಟಿದೆ.

ಆದೇಶದ ಮೇರೆಗೆ,

ಪ್ರಧಾನ ವ್ಯವಸ್ಥಾಪಕರು (ಆ&ಮಾಸಂಅ)
ಮೆಸ್ಕಾಂ.,

**ಪ್ರತಿಗಳು:**

1. ಮುಖ್ಯ ಇಂಜಿನಿಯರ್(ವಿ), ವಲಯ ಕಛೇರಿ, ಮೆಸ್ಕಾಂ., ಮಂಗಳೂರು/ಶಿವಮೊಗ್ಗ.
2. ನಿಯಂತ್ರಣಾಧಿಕಾರಿಗಳು (1&2), ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು.
3. ಅಧೀಕ್ಷಕ ಇಂಜಿನಿಯರ್ (ವಿ)(ತಾಂ)/(ಖ)/(ವಾ)(ಯೋ), ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು.
4. ಕಂಪೆನಿ ಕಾರ್ಯದರ್ಶಿ, ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು.
5. ಸಹಾಯಕ ಪ್ರಧಾನ ವ್ಯವಸ್ಥಾಪಕರು (ಸಿಬ್ಬಂದಿ), ಮೆಸ್ಕಾಂ., ಕಾರ್ಪೊರೇಟ್ ಕಚೇರಿ, ಮಂಗಳೂರು.
6. ಎಲ್ಲಾ ಅಧೀಕ್ಷಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವೃತ್ತಗಳು, ಮೆಸ್ಕಾಂ.,
7. ಅಧೀಕ್ಷಕ ಇಂಜಿನಿಯರ್(ವಿ), ಎಂ.ಆರ್.ಟಿ. ವೃತ್ತ/ಡಿಸಿಸಿ & ಸ್ಕಾಡಾ ಕೇಂದ್ರ/ಮಾ.ಸಂ.ಅ. ಕೇಂದ್ರ, ಮೆಸ್ಕಾಂ.,
8. ಎಲ್ಲಾ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ವಿಭಾಗಗಳು, ಮೆಸ್ಕಾಂ.,
9. ಎಲ್ಲಾ ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್(ವಿ), ಕಾರ್ಯ ಮತ್ತು ಪಾಲನಾ ಉಪವಿಭಾಗಗಳು, ಮೆಸ್ಕಾಂ.,
10. ಕಾರ್ಯನಿರ್ವಾಹಕ ಇಂಜಿನಿಯರ್(ವಿ)(ಐಟಿ), ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು –
    **ಮೆಸ್ಕಾಂ., ವೆಬ್‌ಸೈಟ್‌ನಲ್ಲಿ ಪ್ರಕಟಿಸಲು ಕೋರಲಾಗಿದೆ.**
11. ಲೆಕ್ಕಾಧಿಕಾರಿ (ಸಾ.ಸಂ&ಸಂ)/ಮುಖ್ಯ ಗುಮಾಸ್ತ, ಮೆಸ್ಕಾಂ, ಕಾರ್ಪೊರೇಟ್ ಕಚೇರಿ, ಮಂಗಳೂರು –
    **ಆಡಳಿತ ಕಛೇರಿಯಲ್ಲಿ ಕಾರ್ಯಕ್ರಮದ ಆಯೋಜನೆಗೆ ಕ್ರಮಕೈಗೊಳುವುದು.**

(1–11: ತಮ್ಮ ಅಧೀನ ಅಧಿಕಾರಿ/ನೌಕರರು/ಹೊರಗುತ್ತಿಗೆ ಸಿಬ್ಬಂದಿಗಳಿಗೆ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಲು ಸೂಚಿಸುವಂತೆ ಕೋರಲಾಗಿದೆ.)

12. ಉಪಾಧ್ಯಕ್ಷರು, ಕವಿಪ್ರನಿನಿ ನೌಕರರ ಸಂಘ (ರಿ 659), ಮಂಗಳೂರು.
13. ಸಂಘಟನಾ ಕಾರ್ಯದರ್ಶಿ, ಕವಿಪ್ರನಿನಿ ಲೆಕ್ಕಾಧಿಕಾರಿಗಳ ಸಂಘ, ಮಂಗಳೂರು.
14. ಉಪಾಧ್ಯಕ್ಷರು, ಕವಿಮಂ ಇಂಜಿನಿಯರ್‌ಗಳ ಸಂಘ, ಮಂಗಳೂರು.
15. ಕಂಪೆನಿ ಕಾರ್ಯದರ್ಶಿ, ಕವಿಮಂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಕಲ್ಯಾಣ ಸಂಸ್ಥೆ, ಮಂಗಳೂರು.
16. ಉಪಾಧ್ಯಕ್ಷರು, ಕವಿಪ್ರನಿನಿ ಡಿಪ್ಲೊಮಾ ಇಂಜಿನಿಯರುಗಳ ಸಂಘ, ಮಂಗಳೂರು.
17. ಹಿರಿಯ ಆಪ್ತ ಕಾರ್ಯದರ್ಶಿ ವ್ಯನಿ/ನಿ(ತಾಂ).
18. ಆಪ್ತ ಕಾರ್ಯದರ್ಶಿ ಮು.ಆ.ಅ/ಆಸ.